ನಿಂತಿದ್ದು ಅದನ್ನ ಹೇಗೆ ಸಾಲ್ವ್ ಮಾಡಬೇಕಂತಲೇ ಅವರಿಗೆ ತಿಳೀದೇ ಹೋಯಿತು. ಅದು ಆಗಿದ್ದು ಹೀಗೆ: ಪಾಪ, ಹೆಂಡತಿ ಸ್ಕೂಲಿಗೆ ಬೇರೆ ಹೋಗಬೇಕಲ್ಲ ಅಂತ ರಾಯರು ಮನೆ ಕೆಲಸಕ್ಕೇ ಅಂತ ಒಂದು ಹೆಂಗಸನ್ನ ಗೊತ್ತು ಮಾಡಿದ್ದರು. ಆದರೆ ಆಕೆ ಕೆಲಸಕ್ಕೆ ಸೇರಿದ ಎರಡು ಮೂರು ದಿನಕ್ಕೇ ಹೊಸ ಚಾಲೆಂಜ್ ತಂದಿಟ್ಟಳು. ಅದೇನೂ ಅಂದರೆ ಅವಳು ಚೆನ್ನಾಗಿ ಆಗತಾನೇ ತೊಳೆದು ತಂದಿಟ್ಟ ಪಾತ್ರೆಗಳನ್ನ ಅಹಲ್ಯಬಾಯಿ 'ನೋಡು ಇಲ್ಲಿ! ಮುಸುರೇನೇ ಹೋಗಿಲ್ಲ' ಅಂತ ವಾಪಸ್ಸು ತೊಳೆಯಕ್ಕೆ ಹಾಕೋದು. ಮೊದಮೊದಲು ಆ ಕೆಲಸದ ಹೆಂಗಸಿಗೆ ಇದು ತಮಾಷೆಯಾಗಿ ಕಂಡರೂ ಬರುಬರುತ್ತ ಇದು ಜಾಸ್ತಿಯೇ ಆಗಿಹೋಯಿತು. ಕಡೆಕಡೆಗೆ ಇದು ಯಾವ ಸ್ಥಿತಿಗೆ ಹೋಗಿ ಮುಟ್ಟಿತು ಅಂದರೆ ಆಕೆ ಇನ್ನು ಪಾತ್ರೆ ತೊಳೆದು ಒಳಗೆ ಇಡಬೇಕು ಎನ್ನುವಷ್ಟರಲ್ಲಿ ರಾಯರ ಹೆಂಡತಿ 'ಅಯ್ಯಯ್ಯೋ, ಇನ್ನು ಕೊಳೆ ಹಾಗೇ ಇದೆ. ಮುಸರೆ ಬೇರೆ' ಅಂತ ಹೊರಗಡೆ ತೊಳೆಯೋ ಪಾತ್ರೆಗಳ ಜೊತೆ ಇಟ್ಟು ಬಿಡುವುದು!

ನಿಧಾನದಲ್ಲಿ ಆ ಕೆಲಸದವಳಿಗೂ ತಿಳಿಯುವಂತಹ ಮತ್ತೊಂದು ಸಂಗತಿ ನಡೆಯಿತು. ಒಂದು ದಿವಸ ಆಕೆ ಪಾತ್ರೆಗಳನ್ನು ತೊಳೆದು ಮನೆ ಗುಡಿಸಕ್ಕೇ ಅಂತ ಪರಕೆ ಹುಡುಕುತ್ತಿದ್ದಾಗ ರಾಯರ ಪತ್ನಿ ಅಡಿಗೆ ಮನೆಯಿಂದ ಏನನ್ನೋ ತಂದು ಆಗತಾನೇ ತೊಳೆದ ಪಾತ್ರೆಗೆ ಮೆತ್ತಿದ್ದು ಕಂಡು ಆಕೆ ತಡೆಯಲಾಗದೆ 'ಯಾಕೆ ಅಮ್ಮನೋರೇ, ಈಗ ತಾನೇ ಬೆಳಗಿದ್ದ ಪಾತ್ರೇಗೇನೋ ಬಳೀತಿದೀರಲ್ಲ ಇದು ನ್ಯಾಯವಾ? ಸಿವ ಒಪ್ತಾನಾ? ಹಿಂಗೇ ಆದರೆ ನೀವು ನನಗೆ ಕೊಡಬೇಕಾದ ಸಂಬಳ ಚುಕ್ತಾ ಮಾಡಿ. ನಾಳೆಯಿಂದ ಇನ್ಯಾರನ್ನಾದರೂ ಹುಡುಕ್ಕೊಳ್ಳಿ' ಅಂತ ರಂಪ ಮಾಡಿ ವಠಾರದ ಪ್ರತಿಯೊಂದು ಮನೆಗೂ ಹೋಗಿ ನ್ಯಾಯ ಒಪ್ಪಿಸಿದಳು. ಅದೇ ತಿಂಗಳ ಕಡೆ, ಕಿತ್ತುತಿಂದರೂ ರಾಯರ ಹತ್ತಿರ ಅವಳ ಸಂಬಳ ಕೊಟ್ಟು ಕಳುಹಿಸುವಷ್ಟು ದುಡ್ಡಿರಲಿಲ್ಲ. ಇದರ ಮಧ್ಯೆ ರಾಯರ ಹೆಂಡತಿಯ ಮೈಯಲ್ಲೂ ಇನ್ನೊಂದು ಜೀವದ ಗುರುತು ಬರುವ ಹಾಗೆ ಅನ್ನಿಸುತ್ತಿತ್ತು. ಶ್ರೀನಿವಾಸರಾಯರಿಗೆ ಆ ಕೆಲಸದವಳಿಗೆ ಎಲ್ಲ ಕಥೆ ಹೇಳಿ, ಒಪ್ಪಿಸೋ ಹೊತ್ತಿಗೆ ಸಾಕುಸಾಕಾಗಿಬಿಟ್ಟಿತು.

ಆದರೆ ಇದರಿಂದ ಮತ್ತೊಂದು ಆಯಾಮ ತೆರೆದುಕೊಂಡಿತ್ತೇನೆಂದರೆ ಆಕೆ ತೊಳೆದು, ಬೆಳಗಿದ ಪಾತ್ರೆಗಳನ್ನ ಅಹಲ್ಯಾಬಾಯಿ ಮತ್ತೆ ಮತ್ತೆ ತೊಳೆಯೋದಿರಲಿ 'ಸುಸ್ತಾಗ್ತಾಯಿದೆ ನೀನೆ ಇನ್ನೊಂದು ಸಲ ತೊಳಿ' ಅಂತ ಗಂಡನಿಗೆ ಹೇಳಿ ಹೇಳಿ ರಾಯರಿಗೆ ಇನ್ನೊಂದು ಕೆಲಸ ಅಂಟುಕೊಂಡಿತ್ತು ಬೇರೆ! ರಾಯರು ತಾವೇ ಮತ್ತೆ ತೊಳೆದ ಪಾತ್ರೆಗಳನ್ನ ಇಡುವ ಜಾಗದಲ್ಲಿ ಇಡುವ ಹಾಗಿರಲಿಲ್ಲ. ಆಕೆ ಮತ್ತೆ ಮತ್ತೆ ನೋಡಿ, ಒಳಗಡೆ ಕೈಹಾಕಿ ನೋಡೋದಲ್ಲದೆ ಕಡೆ ಕಡೆಗೆ ಮೂಗಿನ ಹತ್ತಿರ ಇಟ್ಟುಕೊಂಡು ಆಘ್ರಾಣಿಸಿ 'ರ್ರೀ, ಯಾಕೋ ಮುಸುರೆ ವಾಸನೆ ಇನ್ನೂ ಬರ್ತಾ ಇದೆಯಲ್ಲ. ಸರಿಯಾಗಿ ತೊಳೆಯಕ್ಕೆ ಆಗಲ್ವಾ' ಎಂದು ಸಿಡುಕಿ ಪಾತ್ರೆಯನ್ನ ಮತ್ತೆ ತೊಳೆದು ಕುಕ್ಕಿ, ಕುಕ್ಕಿ ಇಡುವರು. ಹೀಗೆ ಕುಕ್ಕಿ ಕುಕ್ಕಿ ಹೆಚ್ಚು ಕಡಿಮೆ ಎಲ್ಲ ಅಡಿಗೆ ಪಾತ್ರೆಗಳೂ ತಳ ನಜ್ಜುನಜ್ಜಾಗಿ ಸುಮ್ಮನೆ ಇಟ್ಟರೆ ಸಾಕು, ದಸರ ಹಬ್ಬದಲ್ಲಿ ಇಟ್ಟಿರೋ ಬೊಂಬೆಗಳ ತರಹ ಆ ಕಡೆಯಿಂದ ಈ ಕಡೆ, ಈ ಕಡೆಯಿಂದ ಆ ಕಡೆ ತಿರುಗುತ್ತಾ ಇರೋವು.

ಶ್ರೀನಿವಾಸರಾಯರಿಗೆ ಮೊದಲಿನಿಂದಲೂ ಊಟ ತಿಂಡಿ ಅಂದರೆ ತುಂಬ ಅಚ್ಚುಕಟ್ಟು! ಕಮ್ಮಿ ತಿಂದರೂ ಪರವಾಗಿಲ್ಲ ಆದರೆ ರುಚಿಯಾಗಿರಬೇಕು, ನೋಡೋಕೆ ಚೆನ್ನಾಗಿರಬೇಕು ಅನ್ನೋರು ರಾಯರು. ಇದಕ್ಕೆ ಸರಿಯಾಗಿ ಅವರ ತಾಯಿ ನರಸಮ್ಮನವರದಂತೂ ಅದ್ಭುತವಾದ ಕೈಚಳಕ ಬರೇ ತೊಗರಿಬೇಳೆ, ಕರಿಬೇವು, ಕೊತ್ತಂಬರಿ ಇದ್ದರೆ ಸಾಕು, ಅವನ್ನೇ ಬೇಯಿಸಿ ದಿವಿನಾದ ಸಾರು